# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103☎:0816-2255650, 2273511,ಫ್ಯಾಕ್ಸ್ :0816-2270719

ಸಂಖ್ಯೆ : ತು.ವಿ.: ಪ.ವಿ.:2022-23/ ೨೨೪ ದಿನಾಂಕ: 04.03.2023

## ಅಧಿಸೂಚನೆ

**ವಿಷಯ:** ಸ್ನಾತಕೋತ್ತರ ಪದವಿಯ ದ್ವಿತೀಯ ಮತ್ತು ನಾಲ್ಕನೇ **(ನವೀನ ಮತ್ತು ಪೂರಕ)** ಸೆಮಿಸ್ಟರ್ ಪರೀಕ್ಷೆಗಳ (CBCS) ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022 ರ ಸೆಪ್ಟೆಂಬರ್/ಅಕ್ಟೋಬರ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕೋತ್ತರ **ಪದವಿಯ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ (ನವೀನ ಮತ್ತು ಪೂರಕ)** (CBCS) ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಫಲಿತಾಂಶ ಪ್ರಕಟಿಸಿದ ಎಲ್ಲಾ ವಿಷಯಗಳ ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದ್ದು, (Mass Communication and Journalism ಹೊರತುಪಡಿಸಿ) ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ವಿಭಾಗಗಳಲ್ಲಿ/ಕಾಲೇಜುಗಳಲ್ಲಿ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು ಮತ್ತು ವಿಭಾಗ/ ಕಾಲೇಜಿನವರು ಸದರಿ ಮಾಹಿತಿಯನ್ನು ಈ ಕೆಳಗೆ ನೀಡಿದ ದಿನಾಂಕದೊಳಗೆ ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

| | |
|---|---|
| ಛಾಲೆಂಜ್ ಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ (Per Paper) | ರೂ. 1,310-00 |
| ವಿದ್ಯಾರ್ಥಿಗಳು ಛಾಲೆಂಜ್ ಮೌಲ್ಯಮಾಪನಕ್ಕೆ ಕಾಲೇಜು/ವಿಭಾಗದಲ್ಲಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 24.03.2023 |
| ವಿಭಾಗ/ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ | 27.03.2023 |
| ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ವಿಭಾಗ/ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕಡೆಯ ದಿನಾಂಕ | 28.03.2023 |

**ವಿಶೇಷ ಸೂಚನೆ:-**

- 2021-22 **ನೇ ಶೈಕ್ಷಣಿಕ ಸಾಲಿನ** ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಶುಲ್ಕ ಪಾವತಿಸತಕ್ಕದ್ದು. ಇತರೆ ವಿದ್ಯಾರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯ (tumkuruniversity.ac.in) ವೆಬ್‌ಸೈಟ್‌ನಲ್ಲಿ ಎಸ್.ಬಿ.ಐ. ಕಲೆಕ್ಟ್ ಮುಖಾಂತರ ಶುಲ್ಕ ಪಾವತಿಸಿ ಸಂಬಂಧಪಟ್ಟ ವಿಭಾಗ/ಕಾಲೇಜುಗಳಿಗೆ ಸಲ್ಲಿಸುವುದು.
- **ಛಾಲೆಂಜ್ ಮೌಲ್ಯಮಾಪನದಲ್ಲಿ ಪಡೆದ ಅಂಕಗಳೇ ಅಂತಿಮವಾಗಿರುತ್ತದೆ. ಕಡೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.**

10/3/23

ಕುಲಸಚಿವರು(ಪರೀಕ್ಷಾಂಗ)

ಗೆ,

ನಿರ್ದೇಶಕರು / ಮುಖ್ಯಸ್ಥರು/ಸಂಯೋಜಕರು/ಪ್ರಾಂಶುಪಾಲರು/ ವಿವಿಧ ಸ್ನಾತಕೋತ್ತರ ವಿಭಾಗಗಳು ಮತ್ತು ವಿವಿಧ ಸ್ನಾತಕೋತ್ತರ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಛೇರಿ ಪ್ರತಿ.
4. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.